**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾಸಾ : 11 (ಚಾಸಾ : 30 )

ಪ್ರಮಾಣೀಕರಿಸಿದ ದಿನಾಂಕ: 10.04.2019

| | |
|---|---|
| ಹೆಸರು | : ಮನು |
| ತಂದೆಯ ಹೆಸರು | : ಸೋಮೇಗೌಡ |
| ವಯಸ್ಸು | : 28 ವರ್ಷ |
| ಕೆಲಸ | : ಹೋಟೆಲ್ |
| ವಾಸ | : ಮಾಲೂರು |

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ನಾನು ಮೊದಲು ಬಿಸ್ಲರಿ ನೀರಿನ ಖ್ಯಾನ್ ಗಳನ್ನು ಮನೆಗಳಿಗೆ ಕೊಡುತ್ತಿದ್ದೆ. 2010 ರಿಂದ 2015 ರವರೆಗೆ ಆ ಕೆಲಸ ಮಾಡುತ್ತಿದ್ದೆ. ಆಗ ಮುನೇಶ್ವರ ನಗರದಲ್ಲಿ ವಾಸ ಇದ್ದೆ. ಬೀರಪ್ಪ ಗೊತ್ತು. ದಿಃ 10.07.2013 ರಂದು ಬೆಳಿಗ್ಗೆ 8.00 ಗಂಟೆಗೆ ಸಮಯದಲ್ಲಿ ಬೀರಪ್ಪ ರವರು ಪೋನ್ ಮಾಡಿ ಅವರ ಮಗಳ ಮನೆಗೆ ನೀರಿನ ಖ್ಯಾನ್ ತಂದು ಕೊಡುವಂತೆ ಹೇಳಿದರು, ನಾನು ಸುಮಾರು 11.00 ರಿಂದ 12.00 ಗಂಟೆ ಹೊತ್ತಿಗೆ ನೀರಿನ ಖ್ಯಾನ್ ಅನ್ನು ಅವರ ಮನೆಗೆ ಕೀಲು ಕೋಟೆಗೆ ತೆಗೆದುಕೊಂಡು ಹೋದೆ. ಅವರ ಮನೆ ಬಾಗಿಲು ಹಾಕಿತ್ತು, ನಾನು ಬಾಗಿಲನ್ನು ತಟ್ಟಿದೆ, ಆದರೆ ಅವರು ತೆಗೆಯಲಿಲ್ಲ. ನಾನು ಬೀರಪ್ಪ ರವರಿಗೆ ಪೋನ್ ಮಾಡಿ ಬಾಗಿಲು ತೆಗೆಯುತ್ತಿಲ್ಲ ಎಂದು ಹೇಳಿದೆ, ಅದಕ್ಕೆ ಅವರು ಹೊರಗೆ ಇಟ್ಟು ಹೋಗು ಎಂದು ಹೇಳಿದರು, ನಾನು ನೀರಿನ ಖ್ಯಾನ್ ಅನ್ನು ಹೊರಗೆ ಇಟ್ಟು ಹೋದೆ. ಬೀರಪ್ಪ ರವರ ಮಗಳು ತೀರಿಹೋಗಿದ್ದಾಳೆ ಎಂದು ಗೊತ್ತಾಯಿತು. ಬೀರಪ್ಪ ರವರು ಪೋನ್ ಮಾಡಿ ನೀರಿನ

ಖ್ಯಾನ್ ವಾಪಸ್ಸು ತೆಗೆದುಕೊಂಡು ಹೋಗಿ ನನ್ನ ಮಗಳು ತೀರಿಕೊಂಡಿದ್ದಾಳೆ ಎಂದು ಹೇಳಿದರು. ಇಷ್ಟೇ ವಿಷಯವನ್ನು ಪೊಲೀಸರಿಗೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ಆ ಸಮಯಲ್ಲಿ ನನ್ನ ಬಳಿ ಇದ್ದ ಮೊಬೈಲ್ ನಂಬರ್. 9035889449 ಆಗಿತ್ತು. ಆಗ ಭೀರಪ್ಪ ರವರ ಬಳಿ ಇದ್ದ ಮೊಬೈಲ್ ನಂಬರ್ ಗೊತ್ತಿಲ್ಲ. ಪೊಲೀಸರು ಒಂದೆರಡು ತಿಂಗಳ ನಂತರ ನನ್ನನ್ನು ಕರೆಸಿದ್ದರು. ಬೀರಪ್ಪ ರವರು 8.00 ಗಂಟೆಗೆ ಪೋನ್ ಮಾಡಿದ್ದರು ಎಂದು ಪೊಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಬೆಳಿಗ್ಗೆ 11.30 ಕ್ಕೆ ನಾನು ವಾಟರ್ ಖ್ಯಾನ್ ತೆಗೆದುಕೊಂಡು ಹೋಗಿ ಅವರ ಮನೆಯ ಬಾಗಿಲ ಬಳಿ ಇಟ್ಟೆ. ನಾನು ಭೀರಪ್ಪ ರವರಿಗೆ ಪೊನ್ ಮಾಡಿದಾಗ 11.30 ರಿಂದ 12.00 ಗಂಟೆ ಆಗಿತ್ತು. ನಾನು ನೀರಿನ ಖ್ಯಾನ್ ಅನ್ನು ಬಾಗಿಲಲ್ಲಿ ಇಟ್ಟು ಖಾಲಿ ಖ್ಯಾನ್ ತೆಗೆದುಕೊಂಡು ಹೋಗಿಲ್ಲ. ನೀರಿನ ಖ್ಯಾನ್ ಕೊಟ್ಟಾಗ ಎಷ್ಟು ಹಣ ಆಗುತ್ತದೆ ಅಷ್ಟು ಪಡೆದುಕೊಂಡು ಬಿಲ್ ಕೊಡುತ್ತೇವೆ ಎಂದರೆ ಸರಿ. 3 ದಿನಗಳಾದ ನಂತರ ಬೀರಪ್ಪ ರವರು ಪೋನ್ ಮಾಡಿ ಖ್ಯಾನ್ ತೆಗೆದುಕೊಂಡು ಹೋಗುವಂತೆ ಹೇಳಿದರು.

ಅದೇ ಮನೆಯಿಂದ ಬೀರಪ್ಪ ರವರು ವಾಟರ್ ಖ್ಯಾನ್ ಅನ್ನು ಕೆಳಗಡೆ ತಂದು ಕೊಟ್ಟರು. ಆ ದಿನ ಬೀರಪ್ಪ ರವರು ಮಗಳು ತೀರಿಕೊಂಡ ವಿಷಯ ನನಗೆ ಗೊತ್ತಾಗಿದ್ದು ಗೊತ್ತಾದರೂ ಸಹ ಬೀರಪ್ಪ ರವರು ನನ್ನನ್ನು ಪೊಲೀಸ್ ಠಾಣೆಗೆ ಬರುವಂತೆ ಕರೆಯಲಿಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾಸಾ ಃ 12 (ಚಾಸಾ ಃ 34 )

ಪ್ರಮಾಣೀಕರಿಸಿದ ದಿನಾಂಕ ಃ 10.04.2019

| | |
|---|---|
| ಹೆಸರು | ಃ ಕೃಷ್ಣಮೂರ್ತಿ |
| ತಂದೆಯ ಹೆಸರು | ಃ ನಾಗರಾಜಪ್ಪ |
| ವಯಸ್ಸು | ಃ 41 ವರ್ಷ |
| ಕೆಲಸ | ಃ ವಕೀಲರು |
| ವಾಸ | ಃ ಕೋಲಾರ |

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ನಮಗೆ ಸೇರಿದ ಮನೆ ಕೀಲುಕೋಟೆಯಲ್ಲಿದ್ದು, 2013 ರಲ್ಲಿ ಆರೋಪಿ ಸಂತೋಷ್ ಕುಮಾರ್ ಅವರ ಹೆಂಡತಿ ವೀಣ ಮತ್ತು ಮಗು ದೀಪ್ತಿ 3 ಜನ ಬಂದು ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು. ದಿಃ 10.07.2013 ರಂದು ನಾನು ನಮ್ಮ ಹಳ್ಳಿಯಲ್ಲಿ ಇದ್ದಾಗ ನಮ್ಮ ಮನೆಯಿಂದ ಪೋನ್ ಮಾಡಿ ಮದಾಹ್ನ 2.30 ಕ್ಕೆ ವೀಣ ಮತ್ತು ದೀಪ್ತಿ ಸತ್ತು ಹೋಗಿದ್ದಾರೆ ಎಂದು ನನ್ನ ಹೆಂಡತಿ ತಿಳಿಸಿದ್ದು, ನಾನು ಊರಿನಿಂದ ವಾಪಸ್ಸು ಬಂದು ನೋಡಿದಾಗ ಆ ಮನೆಯಲ್ಲಿ 2 ಶವಗಳು ಇತ್ತು. ಆಕೆಯ ಗಂಡ ಅಲ್ಲಿ ಸಾಯಿಸಿ ಹೋಗಿದ್ದಾನೆ ಎಂದು ಅಲ್ಲಿ ಇದ್ದವರು ಮಾತನಾಡಿಕೊಳ್ಳತ್ತಿದ್ದರು, ಅದಾದ ಒಂದು ತಿಂಗಳ ನಂತರ ಪೊಲೀಸರು ನನ್ನನ್ನು ಕರೆಸಿದ್ದರು. ಈ ಎಲ್ಲಾ ವಿಷಯಗಳನ್ನು ಹೇಳಿದ್ದೆ .

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ನಾನು 2003 ರಿಂದ ಚಿಂತಾಮಣಿಯಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದೇನೆ. ಎಸ್.ಎಲ್.ಎನ್. ಥಿಯೇಟರ್ ಬಳಿ ನಮ್ಮ ಕಛೇರಿ ಇದೆ. ನನ್ನ ವಾಸದ ಮನೆ ಕೀಲುಕೋಟೆ

ವಿಭೂತಿಪುರದಲ್ಲಿ ಇದೆ. ನಾನು ಪ್ರತಿ ನಿತ್ಯ ಕೊಲಾರದಿಂದ ಚಿಂತಾಮಣಿಗೆ ದ್ವಿಚಕ್ರ ವಾಹನದಲ್ಲಿ ಓಡಾಡುತ್ತೇನೆ. ನನ್ನ ಸ್ವಂತ ಊರು ಮಾದರಕಲ್ಲು, ಚಿಂತಾಮಣಿ ತಾಲ್ಲೂಕು. ಮಾದರಕಲ್ಲಿನಿಂದ ಚಿಂತಾಮಣಿ 17 ಕಿಮೀ ದೂರದಲ್ಲಿ ಇದೆ. ಚಿಂತಾಮಣಿಯಿಂದ ಕೋಲಾರ 33 ಕಿಮೀ ದೂರದಲ್ಲಿ ಇದೆ. ವಿಭೂತಿಪುರದಲ್ಲಿ ಬಾಡಿಗೆ ಮನೆಯಲ್ಲಿ ಇದ್ದೇವೆ. ವಿಭೂತಿಪುರ ಮತ್ತು ಕೀಲುಕೋಟೆ ಬೇರೆ ಬೇರೆ ಬಡಾವಣೆಗಳು. ವಿಭೂತಿಪುರ ಮತ್ತು ಕೀಲುಕೋಟೆ ನಡುವೆ ಒಂದೆರಡು ಫರ್ಲಾಂಗ್ ಅಂತರ ಇದೆ. ಆ ನಡುವೆ ಸಂಸಾರಸ್ಥರ ಮನೆಗಳು ಇವೆ.

ದಿಃ 10.07.2013 ರಂದು ನಾನು ಕೋರ್ಟ್ ಮತ್ತು ನನ್ನ ಕಛೇರಿಗೆ ಹೋಗಿರಲಿಲ್ಲ. ನಾನು 8, 9 ಮತ್ತು 11 ನೇ ತಾರೀಖಿನಂದು ನ್ಯಾಯಾಲಯಕ್ಕೆ ಹೋಗಿರುತ್ತೇನೆ. ನಾನು ಪ್ರತಿ ದಿನ ಡೈರಿ ಬರೆಯುತ್ತೇನೆ. ನಾವು 3 ಜನ ಸಹೋದ್ಯೋಗಿಗಳು ಒಂದು ಕಛೇರಿ ಮಾಡಿಕೊಂಡಿದ್ದೇವೆ. ಬಿ.ಶ್ರೀನಿವಾಸ್ ಮತ್ತು ಕೆಬಿ. ಶ್ರೀನಾಥ ನನ್ನ ಸಹೋದ್ಯೋಗಿಗಳು. ನಾವು ಅವರವರ ಕೇಸುಗಳನ್ನು ಅವರವರೇ ನೋಡಿಕೊಳ್ಳುತ್ತೇವೆ. ಸಂತೋಷ್ ಕುಮಾರ್ ರವರು ವಾಸ ಮಾಡುತ್ತಿದ್ದ ಮನೆ ನಮಗೇನೂ ಸಂಬಂಧ ಇಲ್ಲ. 2013 ರಲ್ಲಿ ನನ್ನ ಮತ್ತು ನನ್ನ ಹೆಂಡತಿಯ ಬಳಿ ಮೊಬೈಲ್ ಇತ್ತು. ಆ ನಂಬರ್ ನೆನಪಿಲ್ಲ.

ದಿಃ10.07.2013 ರಂದು ಬೆಳಿಗ್ಗೆ 10.00 ಗಂಟೆಗೆ ನಾನು ನಮ್ಮ ಮನೆಯಿಂದ ಮಾದರಕಲ್ಲಿಗೆ ಸಾವಿಗೆ ಹೋಗಿದ್ದೆ. 11.30 ಕ್ಕೆ ಮಣ್ಣು ಮಾಡಿದರು. ನನ್ನ ಹೆಂಡತಿ ನಿರ್ಮಲ ಮದ್ಯಾಹ್ನ 2.00 ಗಂಟೆಗೆ ಫೋನ್ ಮಾಡಿದರು. ನಾನು ಮದ್ಯಾಹ್ನ 2.30 ಕ್ಕೆ ನಮ್ಮ ಮನೆಗೆ ಬಂದು ಸಾವಾದ ಮನೆಗೆ ಹೋದೆ.

ನಾನು ಶವಗಳನ್ನು ನೋಡಿದಾಗ ಮದ್ಯಾಹ್ನ 2.30 ಗಂಟೆ ಆಗಿತ್ತು. ನಾನು 5 ನಿಮಿಷ ನೋಡಿ ಹೊರಗೆ ಬಂದೆ. ನಾನು ಮನೆಗೆ ಬಂದು ಇಡೀ ದಿನ ಮನೆಯಲ್ಲಿ ಇದ್ದೆ. ಅಲ್ಲಿಗೆ ಪೊಲೀಸರು ಬಂದರು. ಪೊಲೀಸರು ಬಂದು ವಿಚಾರ ಮಾಡಿ ಶವಗಳನ್ನು ತೆಗೆದುಕೊಂಡು ಹೋಗುವವರೆಗೆ ನಾನು ಅಲ್ಲಿಯೇ ಇದ್ದೆ. ಆಗ ಪೊಲೀಸರು ನನ್ನನ್ನು ಏನೂ ಕೇಳಲಿಲ್ಲ ಹಾಗೂ ನಾನು ಏನೂ ಹೇಳಲಿಲ್ಲ. ನಾನು ಹೋಗಿ ನೋಡಿದಾಗ ಆ ಮನೆಯ ಬಾಗಿಲುಗಳನ್ನು ಹೊಡೆದಿತ್ತೋ ಇಲ್ಲವೋ ನಾನು ಗಮನಿಸಲಿಲ್ಲ. ಆದರೆ ಬಾಗಿಲು ತೆಗೆದಿತ್ತು.

ನಾನು ಹೋಗಿ ನೋಡಿದಾಗ ಮುಖ್ಯ ಬಾಗಿಲು ಮತ್ತು ಆ ರೂಮಿನ ಬಾಗಿಲನ್ನು ಹೊಡೆದು ಹಾಕಿದ್ದು ಅದನ್ನು ನಾನು ನೋಡಿದೆ ಎಂದರೆ ಸಾಕ್ಷಿ ನಾನು ಅಷ್ಟಾಗಿ ಗಮನಿಸಲಿಲ್ಲ ಎಂದು ಹೇಳುತ್ತಾರೆ. ನಾನು ಪೊಲೀಸರ ಮುಂದೆ ನಮ್ಮ ಮನೆಯ ಮುಂಭಾಗಿಲು ಮತ್ತು ಕೊಠಡಿಯ ಬಾಗಿಲನ್ನು ಹೊಡೆದು ಹಾಕಿದ್ದು, ಕೊಠಡಿಯಲ್ಲಿ ಮೃತದೇಹಗಳು ನೆಲದ ಮೇಲೆ ಮಲಗಿದಂತೆ ಇದ್ದವು ಎಂಬ ವಿಷಯವನ್ನು ಹೇಳಿದ್ದೇನೋ ಇಲ್ಲವೋ ನೆನಪಿಲ್ಲ.

ದಿಃ 10.07.2013 ರಂದು ನಾನು ಮೃತಳ ಮನೆಗೆ ಹೋಗಿದ್ದಾಗ ಆ ಮನೆಯ ಹೊಡೆದು ಹಾಕಿದ್ದ ಬಾಗಿಲುಗಳ ಪೋಟೋಗಳನ್ನು ಪೊಲೀಸರು ತೆಗೆದರು ಎಂದರೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡ ದಿನಾಂಕ ಗೊತ್ತಿಲ್ಲ. ನನ್ನ ಹೇಳಿಕೆಯನ್ನು ಯಾರು ಬರೆದುಕೊಂಡರು ಎಂದು ಗೊತ್ತಿಲ್ಲ. ಕೋಲಾರ ನಗರ ಠಾಣೆಯ ಪೊಲೀಸರು ನನಗೇನೂ ಪರಿಚಯ ಇಲ್ಲ. ನನ್ನ ಹೇಳಿಕೆ ಮಾಡಿಕೊಳ್ಳಬೇಕು ಎಂದು ನನ್ನನ್ನು ಪೊಲೀಸ್ ಠಾಣೆಗೆ ಬರಲು ಹೇಳಿದರು.

ಪೊಲೀಸರು ಕರೆಯದೇ ಇದ್ದರೆ ನಾನು ಹೋಗಿ ಹೇಳಿಕೆ ಕೊಡುತ್ತಿರಲಿಲ್ಲ. ದಿಃ 10.07.2013 ರಂದು ನಾನು ನನಗೆ ಗೊತ್ತಿದ್ದ ವಿಷಯಗಳನ್ನು ಪೊಲೀಸರಿಗೆ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ. ದಿಃ 10.07.2013 ರಂದು ತೆಗೆದಿದ್ದ ಪೋಟೋಗಳನ್ನು ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಾಗ ತೋರಿಸಿದರು ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಈ ದಿನ ನೋಡಿದ ಪೋಟೋಗಳು ಕೃತ್ಯ ನಡೆದ ದಿನದಂದು ಸ್ಥಳದಲ್ಲಿ ತೆಗೆದ ಪೋಟೋಗಳಾಗಿದ್ದು, ಸಂತೋಷ್ ಕುಮಾರ್ ರವರು ವಾಸ ಇದ್ದ ಮನೆಯ ಪೋಟೋಗಳು ಆಗಿರುತ್ತವೆ ಎಂದು ಹೇಳಿದ್ದೇನೋ ಇಲ್ಲವೋ ನೆನಪಿಲ್ಲ. ಅಲ್ಲಿ ಸುಮಾರು ಜನ ಸೇರಿದ್ದು, ಸಂತೋಷ್‌ಕುಮಾರ್ ಆತನ ಹೆಂಡತಿಯನ್ನು ಸಾಯಿಸಿದ್ದಾನೆ ಎಂದು ಮಾತನಾಡಿಕೊಳ್ಳುತ್ತಿದ್ದು, ಅವರು ಯಾರು ಎಂದು ಗೊತ್ತಿಲ್ಲ. ನಾನು ಈ ವಿಷಯವನ್ನು ಪೊಲೀಸರ ಮುಂದೆ ಹೇಳಿದ್ದೇನೋ ಇಲ್ಲವೋ ನೆನಪಿಲ್ಲ.

ನನ್ನ ಹೆಂಡತಿ ನನಗೆ ಪೋನ್ ಮಾಡಿ ವಿಷಯ ತಿಳಿಸಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿ ಪೋನ್ ಮಾಡಿ ವಿಷಯ ಹೇಳಿದರು ಎಂದು ನಾನು ಪೊಲೀಸರ ಮುಂದೆ ಹೇಳಿಲ್ಲ.

ನಾನು ಪೊಲೀಸರ ಮುಂದೆ ದಿಃ 10.07.2013 ರಂದು ಮದ್ಯಾಹ್ನ ಸುಮಾರು 2.30 ಕ್ಕೆ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ವೀಣ ಮತ್ತು ಆಕೆಯ ಮಗಳ ದೀಪ್ತಿ ಎಂಬುವವರು ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ಪೋನ್ ಮೂಲಕ ವರ್ತಮಾನ ಬಂದಿದ್ದು, ನಾನು ಕೋಲಾರಕ್ಕೆ ವಾಪಸ್ಸು ಬಂದು ಮನೆಗೆ ಹೋಗಿ ನೋಡಲಾಗಿ ವಿಷಯ ನಿಜವಾಗಿತ್ತು, ಎಂದು ಪೊಲೀಸರ ಮುಂದೆ ಹೇಳಿದ್ದೇನೋ ಇಲ್ಲವೋ ನೆನಪಿಲ್ಲ.

ಫಿರ್ಯಾದಿ ಭೀರಪ್ಪ ನನ್ನ ಪರಿಚಯ ಇಲ್ಲ. ನಾನು ಅವರನ್ನು ನೋಡಿದ್ದೇನೆ. ಅವರು ಈಗ ನ್ಯಾಯಾಲಯದಲ್ಲಿ ಕುಳಿತಿದ್ದಾರೆ. ಬೀರಪ್ಪ ರಮರ ಇದೇ ರೀತಿ ಹೇಳಬೇಕು ಎಂದು ನನಗೆ ಕೇಳಿದ್ದು, ಈ ದಿನ ಅವರು ನ್ಯಾಯಾಲಯದಲ್ಲಿ ಕುಳಿತಿರುವುದರಿಂದ ಭಯಪಟ್ಟುಕೊಂಡು ಅವರು ಹೇಳಿಕೊಟ್ಟಂತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಿರಪ್ಪ ರವರ ಮಗಳು ವೀಣ ದೀಪ್ತಿಯನ್ನು ಸಾಯಿಸಿ ಆಕೆ ನೇಣು ಹಾಕಿಕೊಂಡ ವಿಷಯ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾಸಾ ಃ 13 (ಚಾಸಾ ಃ 10 )

ಪ್ರಮಾಣೀಕರಿಸಿದ ದಿನಾಂಕ ಃ 10.04.2019

| | |
|---|---|
| ಹೆಸರು | ಃ ನಾರಾಯಣಸ್ವಾಮಿ ಬಿ.ಎನ್. |
| ತಂದೆಯ ಹೆಸರು | ಃ ನಾರಾಯಣಪ್ಪ |
| ವಯಸ್ಸು | ಃ 57 ವರ್ಷ |
| ಕೆಲಸ | ಃ ವಿದ್ಯಾ ಇಲಾಖೆಯಲ್ಲಿ ಕೆಲಸ |
| ವಾಸ | ಃ ಕಾಡುಗೋಡಿ, ಬೆಂಗಳೂರು |

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ಈಗ ನನಗೆ ತೋರಿಸಿದ ಮಹಜರ್ ನಲ್ಲಿ ಜಾಲಪ್ಪ ಆಸ್ಪತ್ರೆಯಲ್ಲಿ ದಿಃ 11.07.2013 ರಂದು ಸಹಿ ಮಾಡಿದ್ದೇನೆ. ನನಗೆ ಬೀರಪ್ಪ ರವರ ಪರಿಚಯ ಇದ್ದು, ಅವರ ಮಗಳು ತೀರಿಕೊಂಡ ವಿಷಯ ಗೊತ್ತಾಗಿ ಜಾಲಪ್ಪ ಆಸ್ಪತ್ರೆಗೆ ಹೋದಾಗ ಬೆಳಿಗ್ಗೆ 10.30 ಕ್ಕೆ ಸದರಿ ಸಹಿಯನ್ನು ಮಾಡಿರುತ್ತೇನೆ. ಸದರಿ ಶವ ಮಹಜರ್ ಅನ್ನು ನಿಪಿ 14 ಮತ್ತು ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಅನ್ನು ತಹಶೀಲ್ದಾರ್ ರವರು ಬರೆಸಿದ್ದಾರೆ. ಅದರ ವಿಷಯ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ನನಗೆ ಬಿರಪ್ಪ ರವರು 2004 ರಿಂದ ಪರಿಚಯ. ಅವರು ಹೆಬ್ಬಾಳದಲ್ಲಿ ವಾಸ ಇದ್ದರು. ನಾನು ಅವರ ಮನೆಗೆ ಹೋಗುತ್ತಿರಲಿಲ್ಲ. ನಾನು ದಿಃ 10.07.2013 ರಂದು ಬೆಂಗಳೂರಿನ ದಕ್ಷಿಣ ಡಿ.ಡಿ.ಪಿ.ಐ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆ. ಆಗನಿಂದ ಅದೇ ಡಿ.ಡಿ.ಪಿ.ಐ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ.

ನಮ್ಮ ಕಛೇರಿ ಕಲಾಸಿಪಾಳ್ಯಂ ನಲ್ಲಿ ಕಿಮ್ಸ್ ಆಸ್ಪತ್ರೆಯ ಎದುರು ಇದೆ. ಬೀರಪ್ಪ ರವರು ಬೆಂಗಳೂರು ಉತ್ತರದಲ್ಲಿ ಕೆಲಸ ಮಾಡುತ್ತಾರೆ. ಅವರ ಕಛೇರಿ ಮೈಸೂರು ಬ್ಯಾಂಕ್ ಸರ್ಕಲ್ ನಲ್ಲಿ ಇದೆ. ದಿಃ 10.07.2013 ಮತ್ತು 11.07.2013 ಕರ್ತವ್ಯದ ದಿನಗಳಾಗಿರುತ್ತವೆ. ನಾನು ವಿಷಯ ಪರೀಕ್ಷಕ. ನಮ್ಮ ಮೇಲಾಧಿಕಾರಿ ಡಿ.ಡಿ.ಪಿ.ಐ. ಆ ಸಮಯದಲ್ಲಿ ಕೆ. ಪದ್ಮಾವತಿ ರವರು ಡಿ.ಡಿ.ಪಿ.ಐ ಆಗಿದ್ದರು. ನಾವು ಕಛೇರಿಯಿಂದ ಹೊರಗೆ ಹೋಗಬೇಕಾದರೆ ಮೇಲಾಧಿಕಾರಿ ಅನುಮತಿ ಪಡೆಯಬೇಕು.

ನಾನು ದಿಃ 11.07.2013 ರಂದು ಕಾರಿನಲ್ಲಿ ಬೆಳಿಗ್ಗೆ 6.15 ಕ್ಕೆ ಬೆಂಗಳೂರು ಬಿಟ್ಟು ಜಾಲಪ್ಪ ಆಸ್ಪತ್ರೆಗೆ ಬಂದೆ. ನನ್ನ ಶ್ರೀಮತಿ ಸಹ ನನ್ನ ಜೊತೆ ಬಂದಿದ್ದರು. ನಾನು ಆಸ್ಪತ್ರೆಗೆ ಬರುವ ಮೊದಲು ಬೀರಪ್ಪ ರವರನ್ನು ಬೇಟಿಯಾಗಿರಲಿಲ್ಲ. ದಿಃ 10.07.2013 ರಂದು ರಾತ್ರಿ 9.00 ಗಂಟೆ ವಾರ್ತೆಯಲ್ಲಿ ಬರುತ್ತಿತ್ತು. ರಾತ್ರಿ 9.00 ಗಂಟೆಗೆ ವಿಷಯ ಗೊತ್ತಾದ ಮೇಲೆ ಬೆಳಿಗ್ಗೆ ಹೊರಟು ಬಂದೆವು. ನಾವು ಬೆಳಿಗ್ಗೆ 7.30 ಕ್ಕೆ ಆಸ್ಪತ್ರೆಗೆ ಬಂದಾಗ ಅಲ್ಲಿ ಬೀರಪ್ಪ ಮತ್ತು ಮನೆಯವರು ಯಾರೂ ಇರಲಿಲ್ಲ.

ನಾವು ಆಸ್ಪತೆಗೆ ಹೋದಾಗ ಅಲ್ಲಿ ಬೀರಪ್ಪ ರವರ ಸಂಬಂಧಿಕರು ಸೊಣ್ಣೇಗೌಡ ಇದ್ದು, ಅವರನ್ನು ವಿಚಾರಿಸಿದೆ. ನಮ್ಮ ರೀತಿ ಸಾಕಷ್ಟು ಸಾರ್ವಜನಿಕರು ಆಸ್ಪತ್ರೆಯಲ್ಲಿ ಇದ್ದರು. ಸದರಿ ಮಹಜರ್ ನ ಒಕ್ಕಣೆಯನ್ನು ನಾನು ಹೇಳಿ ಬರೆಸಿಲ್ಲ. ಅದನ್ನು ಬರೆದವರ ಹೆಸರು ಗೊತ್ತಿಲ್ಲ. ಆ ರೀತಿ ಬರೆದವರು ಅವರು ಸಹಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಾನು ದಿಃ 11.07.2013 ರಂದು ಜಾಲಪ್ಪ ಆಸ್ಪತ್ರೆಗೆ ಹೋಗಿಲ್ಲ ಮತ್ತು ದಿಃ 12.07.2013 ರಂದು ವಿಷಯ ಗೊತ್ತಾಗಿ ಪೊಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ತಹಶೀಲ್ದಾರ್ ರವರು ಕೇಳಿದಾಗ ನಾನು ದಿಃ 10.07.2013 ರಂದು ಟಿ.ವಿ. ಮಾಹಿತಿ ಪಡೆದು ಅಲ್ಲಿಗೆ ಬಂದೆ ಎಂದು ಹೇಳಲಿಲ್ಲ. ದಿಃ 11.07.2013 ರಂದು ನಾನು ಕಛೇರಿಗೆ ಹೋಗಲಿಲ್ಲ ಆದರೆ ವಿಸಿಟ್ ಹೋಗಿದ್ದೆ. ವಿಸಿಟ್ ಪುಸ್ತಕದಲ್ಲಿ ಕೇವಲ ಸರ್ಕಾರಿ ಕೆಲಸದ ಮೇಲೆ ಹೊರಗೆ ಹೋದರೆ ಮಾತ್ರ ಬರೆಯುತ್ತೇವೆ. ಬೀರಪ್ಪ ರವರು ಈಗಲೂ ನ್ಯಾಯಾಲಯದಲ್ಲಿ ಕುಳಿತಿದ್ದಾರೆ. ಅವರು ಹೇಳಿಕೊಟ್ಟಂತೆ ನಾನು ಸದರಿ ಸಹಿಯನ್ನು 12 ನೇ ತಾರೀಖಿನಂದು ಮಾಡಿದ್ದರೂ 11 ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಃ ಕೋಲಾರ**

**ಎಸ್ ಸಿ. 8/2014**

ಪ್ರಾಸಾ : 14 (ಚಾಸಾ : 14 )

ಪ್ರಮಾಣೀಕರಿಸಿದ ದಿನಾಂಕ : 10.04.2019

| | |
|---|---|
| ಹೆಸರು | : ಎಲಿಯವಿವೇಕ್ |
| ತಂದೆಯ ಹೆಸರು | : ಎಜಿಕಲ್ ಪ್ರಭಾಕರ್ |
| ವಯಸ್ಸು | : 31 ವರ್ಷ |
| ಕೆಲಸ | : ಸ್ಟಾಪ್ ನರ್ಸ್, ಕೊಲಂಬಿಯಾ ಏಷಿಯಾ ಆಸ್ಪತ್ರೆ |
| ವಾಸ | : ಕೋಲಾರ |

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಪಿಪಿ ರವರರಿಂದಃ**

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು, ಅದನ್ನು ಜಾಲಪ್ಪ ಆಸ್ಪತ್ರೆಯಲ್ಲಿ ದಿಃ 11.07.2013 ರಂದು ಬೆಳಿಗ್ಗೆ 10.00 ಗಂಟೆಗೆ ಮಾಡಿದ್ದೇನೆ, ಪೋಲೀಸರು ಸದರಿ ದಾಖಲೆಯಲ್ಲಿ ಮಗುವಿನ ಕೊಲೆಯ ಬಗ್ಗೆ ಬರೆದಿರುತ್ತಾರೆ. ಸದರಿ ದಾಖಲೆಯ ಒಕ್ಕಣೆಯನ್ನು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ. ಸದರಿ ಶವ ಪಂಚನಾಮೆಯನ್ನು ನಿಪಿ 15 ಮತ್ತು ಸಹಿಯನ್ನು ನಿಪಿ 15 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್ಎಸ್ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು 2013 ರಲ್ಲಿ ಇ.ಟಿ.ಸಿ.ಎಂ. ಆಸ್ಪತ್ರೆಯಲ್ಲಿ ಲಚ್ಚರರ್ ಆಗಿದ್ದೆ. ಪ್ರತಿ ದಿನ ಬೆಳಿಗ್ಗೆ 8.00 ರಿಂದ ಸಂಜೆ 4.00 ಗಂಟೆಯವರೆಗೆ ಕರ್ತವ್ಯದಲ್ಲಿ ಇರುತ್ತಿದ್ದೆ. ನನಗೆ ಶನಿವಾರ ಅರ್ದ ದಿನ ಮತ್ತು ಭಾನುವಾರ ಪೂರ್ತಿ ದಿನ ರಜೆ ಇರುತ್ತಿತ್ತು. ನಾವು ಕೆಲಸಕ್ಕೆ ಹೋಗದೇ ಇದ್ದರೆ ಒಂದು ದಿನ ಮೊದಲೇ ರಜೆ ಅರ್ಜಿ ಸಲ್ಲಿಸಬೇಕು ಎಂದರೆ ಸರಿ. ದಿಃ 10.07.2013 ಮತ್ತು ದಿಃ11.07.2013 ರಂದು ರಜೆ

ಕೋರಿ ಅರ್ಜಿ ಸಲ್ಲಿಸಿರಲಿಲ್ಲ. ಸದರಿ ಮಹಜರ್ ನಲ್ಲಿ ಓದಿ ಹೇಳಿ ಎಲ್ಲಾ ಸರಿ ಇದೆ ಎಂದು ಬರೆದಿಲ್ಲ. ಸದರಿ ಮಹಜರ್ ಅನ್ನು ಯಾರು ಬರೆದಿದ್ದು ಎಂದು ಗೊತ್ತಿಲ್ಲ. ಸದರಿ ಮಹಜರ್ ನ ಒಕ್ಕಣೆಯನ್ನು ನಾನು ಹೇಳಿ ಬರೆಸಿಲ್ಲ. ನನಗೆ ಕೋಲಾರ ನಗರ ಠಾಣೆ ಚೆನ್ನಾಗಿ ಗೊತ್ತು. ದಿಃ 12.07.2013 ರಂದು ಕೋಲಾರ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿಕೊಂಡು ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ.

ಜಾಲಪ್ಪ ಆಸ್ಪತ್ರೆ ನಮ್ಮ ಮನೆಯಿಂದ ಸುಮಾರು 2 ವರೆ ಕಿಮೀ ಅಂತರ ಇದೆ. ನಾನು ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

ಓದಿ ಹೇಳಿ ಕೇಳಿ ಸರಿ ಇದೆ.

(ಬಿ. ಎಸ್. ರೇಖ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.